(3) ಸವಾಲ್ ಮಾಡುವದಕ್ಕೆ ಉದ್ದೇಶ್ಯವುಳ್ಳವರು ಖುದ್ದಾಗಿ ಆಗಲೀ ಅಥವಾ ಕ್ರಮ ಪ್ರಕಾರ ಅಧಿಕಾರ ಪಡದ ವಿಜಂಟರ ಮೂಲಕವಾಗಿಯೇ ಆಗಲೀ ಹರಾಜಿಗೆ ಬರತಕ್ಕದ್ದು. ಒಂದು ನೂರು ರೂಪಾಯಿಗಳು ಡಿಪಾಜಿಟ್ಟು ಇಟ್ಟುಹೊರ್ತು ಯಾವ ಮನುಷ್ಯನಿಗೂ ತನಗಾಗಿಯೇ ಆಗಲಿ ಅಥವಾ ಇತರರಿಗೋಸ್ಕರವಾಗಿಯೇ ಆಗಲಿ ಹರಾಜು ಕಾಲದಲ್ಲಿ ಸವಾಲು ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಛಡ ದರಖಾಸ್ತುದಾರನಲ್ಲದೆ ಬಾಕಿ ದರಖಾಸ್ತುದಾರುಗಳಿಂದ ಡಿಪಾಜಿಟ್ಟು ಮಾಡಲ್ಪಟ್ಟ ಮೊಬಲಗು ಹರಾಜು ಪೂರೈಸಿದ ನಂತರ ಅವರುಗಳಿಗೆ ವಾಪಸು ಮಾಡಲ್ಪಡುತ್ತೆ.

(4) ಛಡ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಖೈದುಗಿ ಡೆಪ್ಯುಟಿ ಕವಿಾಷನರ ಸಾಹೇಬರವರಿಂದ ಮುಂಜೂರಾದ ಕ್ಷಣವೇ ಹರಾಜು ಅರ್ಧ ಮೊಬಲಗು ಇದಕ್ಕೆ ರೂಪಾಯಿ ಬಂದಕ್ಕೆ ಒಂದಾಣೆ ಲೋಕಲ್ ಸೆಸ್ ಸೇರಿಸಿ ಆಗುವ ಹಣವನ್ನು ಹಾಜರ್ಮಾಡಬೇಕು. ಮಿಕ್ಕರ್ಧವನ್ನು ಲೋಕಲ್ ಸೆಸ್ ಸಂಗಡ 1905ನೆ ಜುಲ್ಯೆ ಮೊದಲನೆ ವಾರದಲ್ಲಿಯೇ ಪಾವತಿ ಮಾಡಬೇಕು. ಆ ಮೇರೆ ಮಿಕ್ಕ ಅರ್ಧ ಮೊಬಲಗು ಪಾವತಿ ಮಾಡದೆ ತಪ್ಪಿದರೆ ಬಾಬು ರೂಢಿಸುವ ಹಕ್ಕುದಾರಿಯನ್ನು ರದ್ದುಮಾಡಿ ಬಾಬನ್ನು ಪುನಃ ಹರಾಜು ಮಾಡಿಸುತ್ತೆ.

(5) ಮೇಲ್ಕಂಡಂತೆ ನಡಿಸುವ ದುಸರೆ ಹರಾಜಿನ ನಷ್ಟಕ್ಕೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಲಾಭ ಏನಾದರೂ ಬಂದರೆ ಆತನಿಗೆ ಏನೂ ಅದಕ್ಕೆ ಹಕ್ಕು ಇರುವದಿಲ್ಲಾ. ಅವಲ್ ಹರಾಜು ಮೊಬಲಗೂ ದುಸರೆ ಹರಾಜಿನ ಮೊಬಲಗೂ ಮಧ್ಯೆ ಕಮ್ಮಿ ಎಷ್ಟಾಗುತ್ತೋ ಅಷ್ಟು ಮೊಬಲಗನ್ನು ಅವಲ್ ಹರಾಜುದಾರನಿಂದ ರವಿನ್ಯೂ ಕಂದಾಯದಂತೆ ವಸೂಲ್ ಮಾಡಲ್ಪಡಲಾದೀತು.

(6) ಛಡ ಸವಾಲ್‌ದಾರನು ತನಿಗೆ ಬಾಬು ಸುಫರ್ದು ಆಗುವದಕ್ಕೆ ಮುಂಚೆ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗೆ ಕಾಣಿಸುವ ಷರತ್ತುಗಳ ಮ್ಯೂರೆ ಅಗ್ರಿಮೆಂಟು ಬರದುಕೊಡಬೇಕು.

ಷರತ್ತುಗಳು.

(1) ಒಂದು ವರುಷದ ಒಳಗಿನ ಗಿಡಗಳನ್ನು ಕಡಿಯಕೂಡದು.

(2) ಆಗಾಗ್ಯೆ ಸಾಗಿಸಿಕೊಳ್ಳುವ ಚಕ್ಕೆ ವೊತ್ತ ತಪಕೀಲು ತಿಳಿಸುವ ಲೆಖ್ಕಗಳನ್ನು ಇಡಬೇಕು. ಅಮಲ್‌ದಾರು ಯಾ ಇತರ ಆಫಿಸರು ಲೆಖ್ಕಗಳನ್ನು ತನಿಖೆ ಮಾಡುವದಕ್ಕೆ ಅವಕಾಶ ಕೊಡಬೇಕು.

(3) ಚಕ್ಕೆ ಸಾಗಿಸುವದಕ್ಕೆ ಫಾರಸ್ಸು ಇಲಾಖಾ ಮೂರೀಫತ್ತು ಡೆಪ್ಯೂಟಿ ಕವಿಾಷನರ ಸಾಹೇಬರವರು ಯಾವ ರೀತಿ ವಿಧಿಸುತ್ತಾರೋ ಆ ರೀತಿ ಪ್ಯಾಸ್ ಪಡದು ಸಾಗಿಸಿಕೊಳ್ಳಬೇಕು.

(4) 1906ನೆ ಜೂನ್ ಆಖೈರ್ ಒಳಗಾಗಿ ಕಡದು, ಜಮಾಯಿಸಿ, ದಾಸ್ತಾನಾಗಿ ಇಟ್ಟುಕೊಂಡಿರುವ ಎಲ್ಲಾ ಚಕ್ಕೆಯನ್ನು ತಾಲ್ಲೂಕು ಯಾ ತಾಲ್ಲೂಕುಗಳ ಸರಹದ್ದು ಹೊರಕ್ಕೆ ಸಾಗಿಸಿಕೊಳ್ಳಬೇಕು.

(5) ಚಕ್ಕೆ ತೆಗದುಕೊಳ್ಳುವದಕ್ಕೆ ಹೊರ್ತು, ಗೊಬ್ಬರಕ್ಕೆ ಸೊಪ್ಪುಗೋಸ್ಕರವೇ ಆಗಲಿ, ಸೌದೆಗೆ ಆಗಲೀ ಅಥವಾ ಇತರ ಕೆಲಸಗಳಿಗಾಗಲೀ ತಂಗಡಿ ಗಿಡಗಳನ್ನು ಕಡಿಯಕೂಡದು.

(6) ಬಾಬು ಷಿಕ್ಕಿ ಕಂಟ್ರಾಕ್ಟು ಕೊಡುವ ವಿಷಯದಲ್ಲಿ ಡೆಪ್ಯುಟಿ ಕವಿಾಷನರ ಸಾಹೇಬರವರ ಅಪ್ಪಣೆ ಮುಂಚೆ ಪಡಿಯಬೇಕು.

(7) ಈ ಷರತ್ತುಗಳಲ್ಲಿ ಯಾವದಕ್ಕೆ ತಪ್ಪು ನಡದರೂ ಕಂಟ್ರಾಕ್ಟನ್ನು ರದ್ದು ಮಾಡುವದಲ್ಲದೆ ಅದುವರಿಗೆ ಹೊರಗೆ ರಫ್ತು ಮಾಡಿಕೊಳ್ಳದೆ ನಿಲ್ಲಿಸಿರುವ ಎಸಪ್ಟ ಚಕ್ಕೆಯು ಸರ್ಕಾರಕ್ಕೆ ಸೇರಿಸಿಕೊಳ್ಳಲಾದೀತು.

N. B.—ಚಕ್ಕೆ ತೆಗದುಕೊಂಡ ಮೇಲೆ ನಿಲ್ಲುವ ಖಡ್ಡಿಗಳು ಹರಾಜುದಾರನದೇ ಆಗಿರುತ್ತವೆ.

ಬಿ. ಹೀರಾಸಿಂಗ್,
ಫಾರ್ ಡೆಪ್ಯೂಟಿ ಕವಿಾಷನರ್, ತುಮಕೂರು ಡಿಸ್ಟ್ರಿಕ್ಟು.

ಪೊಲೀಸ್.

ಚಹರೆ ಪಟ್ಟಿ.

ಸ|| 1904ನೆ ಇಸವಿ ಏಪ್ರೆಲ್ ತಾರೀಖು 3ರಲ್ಲಿ ಬವರಿಂಗ್ ಪೇಟೆ ತಾಲ್ಲೂಕು ಬೇತಮಂಗಲ ಪೊಲೀಸ್ ಸ್ಟೇಷನ್‌ಗೆ ಕೇರಿದ ಕಣ್ಣೂರ್ ಗ್ರಾಮದಲ್ಲಿ ಇರುವ ತನ್ನ ಮನೆಯಿಂದ ಹೊರಟು ಹೋಗಿ ವಾಪಸು ಬಾರದೇ ಇರುವ ಪಾಪಕ್ಕನದು—

1.	ಹೆಸರು	.. ...	ಪಾಪಕ್ಕ.
2.	ವಯಸ್ಸು	... ..	ಸುಮಾರು 45 ವರುಷ.
3.	ಜಾತಿ	... ...	ಕಮ್ಮ ವಕ್ಕಲು.
4.	ಭಾಷೆ	..	ತೆನುಗು.
5.	ಬಂಣ	... ..	ಎಣ್ಣಗೆಂಪು.

6. ಕೋಲುಮುಖ, ಮೂಗು ಸ್ವಲ್ಪ ಉದ್ದವಾಗಿದೆ. ತಲೆಕೂದಲು ಕಪ್ಪು ಬಿಳೀ ಕೂದಲು ಮಿಶ್ರವಾಗಿತ್ತು. ಸುಮಾರು 5 ಅಡಿ ಎತ್ತರ, ಮುಂಭಾಗದ ಮೇಲುಪೆರಸ ನಾಲ್ಕು ಹಲ್ಲುಗಳು ಸವದುಹೋಪಂತಿದೆ. ಸಾಧಾರಣ ಶರೀರಸ್ಥಿತಿಯುಳ್ಳವಳು. ವಿಧವೆ. ಗಂಡನಾದ ಶೇದುಭೂಮಿ ವೆಂಗೈಯ್ಯ ಮೃತಪಟ್ಟಿರುತ್ತಾನೆ.

ಕಡೇಸಲು ಮನೆ ಬಿಟ್ಟು ಕಾಲದಲ್ಲಿ ಸದರಿ ಯವಳು ಈ ಕೆಳಗಿನ ವಡವೆಗಳು ಧರಿಸಿಯಿದ್ದಳು.

		ರೂ.	ಆ.	ಪೈ.
(1)	ಪರಟುಅಡ್ಡಿಕೆ ಭಂಗಾರದ್ದು 8 ಬಂಣ, 12 ವರಹ ತೂಕ, ಕ್ರಯ ಸುಮಾರು	70	0	0
(2)	ಭಂಗಾರದ ವಾಲೆ ಮತ್ತು ಜುಂಕಿ ಸಮೇತ ಜೊತೆ ಒಂದು, ಗಿಣಿಗಳು ಚಕ್ಕತ್ತು, ಕ್ರಯ ಸುಮಾರು	30	0	0
(3)	ಬೆಳ್ಳಿ ಉಡಿದಾರ ಅಲಸಿನಕಾಯಿ ತಾಯಿತ ಸಮೇತ, ಕ್ರಯ ಸುಮಾರು ..	10	0	0
(4)	ಬೆಳ್ಳಿ ಬುರ್ರಿ ಬಳೆಗಳು 4ಕ್ಕೆ, ಕ್ರಯ	5	0	0
(5)	ಕೆಂಪುಮುಂಗೀ ನೂಲಕೀರೆ ವುಟ್ಟಿದಾಳೆ.			
(6)	ಕೈಲಿ ಬಿದಿರು ಮಕ್ಕರಿ ಒಂದು ಇತ್ತು.			

ಚಿತ್ತೂರು ಮತ್ತು ಅಂಬೂರು ತಾಲ್ಲೂಕುಗಳಲ್ಲಿ ನೆಂಟಸ್ಥರಿದ್ದಾರೆ.

ಇವಳು ಜೀವಂತಳಾಗಿರಲಿ, ಅಥವಾ ಮೃತಪಟ್ಟಿರಲಿ, ಇವಳ ವಿಷಯವಾಗಿ ತಿಳಿಯಬರುವ ಸಮಾಚಾರವನ್ನು, ಕೋಲಾರ್ ಗೋಲ್ಡ್ ಫೀಲ್ಡ್ಸ್ ಹ|| ಪೋ|| ಸೂ|| ಸಾಹೇಬರವರ ಆಫೀಸಿಗೆ ತಿಳಿಸತಕ್ಕದ್ದಾಗಿದೆ.

ಪಿ. ಎಫ್. ಬಾರಿಂಗ್,
ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಕೋಲಾರ್ ಗೋಲ್ಡ್ ಫೀಲ್ಡ್ಸ್.